

# ಬ್ಲೊಸನ್ ಟಾಪ್

*ಈವತ್ತು ಎಲ್ಲರನ್ನೂ ಆಕರ್ಷಿಸುವಂತೆ ಬ್ಲೊಸನ್ ಟಾಪ್ ಹೇಗೆ ಮಾಡೋದು ಅಂತ ನೋಡೋಣ*

## ಅಗತ್ಯವಿರುವ ವಸ್ತು

ಅರವತ್ತುಇಂಚು ಅಗಲವಿರುವ ಒಂದೂ ವರೆ ಮೀಟರ್ ಬಟ್ಟೆ.
ಬ್ಲೊಸನ್ ಟಾಪ್ ಗೆ ಬೇಕಾದ ಮಾದರಿಯನ್ನು ನಮ್ಮ ವೆಬ್ ಸೈಟ್ **www.ushasew.com**ನಲ್ಲಿ ಪಡೆಯಬಹುದು.
ಒಂದು ಬಳಪ
ಕತ್ತರಿ
ದಾರ
ಪಿನ್
ಅಳತೆ ಪಟ್ಟಿ

ಮೊದಲು ಬ್ಲೊಸನ್ ಟಾಪನ್ನು ಒಂದೂ ವರೆ ಇಂಚು ಮಡಚುವುದರಿಂದ ಪ್ರಾರಂಭಿಸೋಣ. ಮುಂಭಾಗ ಮುಂಭಾಗವನ್ನು ನೊಡುವ ಹಾಗೆ ಇರಬೇಕು.ಮತ್ತೆ ಅದನ್ನು ಅರ್ಧಕ್ಕೆ ಮದಚಬೇಕು. ಮಡಚುವಾಗ ಅಂಚು ಸರಿಯಾಗಿದೆಯಾ ನೊಡಿಕ್ಕೊಳ್ಳಿ ಅದು ಬೇರೆ ಬೇರೆಯಾಗಿರಬಾರದು. ಈ ವೀಡಿಯೋದಲ್ಲಿ ತೋರಿಸಿರುವಂತೆ. ನಿಮ್ಮ ಬಟ್ಟೆ ನಾಲ್ಕು ಪದರದಲ್ಲಿ ಇರಬೇಕು.

ಮೊದಲ ಹಂತ : ಮಾದರಿಯನ್ನು ಮಾರ್ಕ್ ಮಾಡಿ ಕತ್ತರಿಸಬೇಕು

ಮಡಚಿರೋದು ಕೆಳಭಾಗ ಮತ್ತು ಬಲಭಾಗ ಇರುವ ಹಾಗೆ ತಿರುಗಿಸಿಕ್ಕೊಳ್ಳಬೇಕು**www.ushasew.com**.ಇಂದ ತೆಗೆದುಕೊಂಡ ಮಾದರಿಯನ್ನು ಈ ಬಟ್ಟೆಯ ಮೇಲೆ ಇಡಿ, ಹಾಗೆ ಇಡೋವಾಗ ಮಾದರಿಯ ನೇರವಾದ ಅಂಚಿನಲ್ಲಿನ ಬಟ್ಟೆಯ ಮೇಲೆ ಇರುವ ಬಲಭಾಗದ ಮಡಿಕೆ ಮೇಲೆ ಇಡಬೇಕು. ಮಾದರಿ ಕದಲದೆ ಇರಲು ಪಿನ್ ಇಂದ ಭದ್ರಗೊಳಿಸಿ.

ಇದು ಒಂದು ಸಣ್ಣ ಅಳತೆಯ ಟಾಪ್ ನ ಮಾದರಿ. ಇದರ ಅಳತೆಗಳನ್ನು ಈಗ ನೋಡೊಣ.

ಅದಾದ ನಂತರ ಒಂದು ಬಳಪತೆಗೆದುಕೊಂಡು ಮಾದರಿಯನ್ನು ಇಟ್ಟು ಮಾರ್ಕ್ ಮಾಡಿಕೊಳ್ಳಿ, ಇದರ ಪರಿಪೂರ್ಣತೆ ಬಹಳ ಮುಖ್ಯ ನಿಮ್ಮ ಬ್ಲೊಸನ್ ಟಾಪ್ ನೋಡಲು ಇದರಂತೆ ಇರುತ್ತೆ. ಮಾರ್ಕ್ ಮಾಡಿ ಮುಗಿಸಿದ ನಂತರ ಮಾದರಿಯನು ತೆಗೆಯಿರಿ. ನೀವು ವೀಡಿಯೋದಲ್ಲಿ ನೋಡಿದ ಹಾಗೆ ನಿಮ್ಮ ಬಟ್ಟೆಯಲ್ಲಿ ಅರ್ಧ ಬೌಸ್ ಬರೆಯಲ್ಪಟ್ಟಿರುತ್ತದೆ. ಈಗ ಇದನ್ನು ಮುಗಿಸೋಣ.

ಒಂದು ಕತ್ತರಿಯನ್ನು ತೆಗೆದುಕೊಂಡು ಮಾರ್ಕ್ ಮೇಲೆ ನೀಟಾಗಿ ಕತ್ತರಿಸಿ, ಬಟ್ಟೆಯ ಎಲ್ಲಾ ಪದರವನ್ನು ಕತ್ತರಿಸುತ್ತಿದ್ದೀರಾ ಎಂದು ನೋಡಿಕ್ಕೊಳ್ಳಿ, ಹಾಗೆ ಎಚ್ಚರಿಕೆಯಿಂದಾನೂ ಇರಿ. ಈಗ ಬಟ್ಟೆಯ ಮಡಿಕೆಯನ್ನು ತೆಗೆಯಿರಿ ವೀಡಿಯೋದಲ್ಲಿ ತೋರಿಸಿದಂತೆ ಬೌಸ್ನಲ್ಲಿ ಸೇರಿಸುವಂತೆ ಎರಡು ವಿವಿಧ ಭಾಗಗಳು ನಿಮ್ಮಹತ್ರ ಇರುತ್ತೆ.ಈಗ ಈ ಎರಡು ಭಾಗಗಳನ್ನು ಸೇರಿಸುವಂತೆ ಕೆಲಸ ಮಾಡೋಣ. ಮೊದಲು ತೋಳುಗಳನ್ನು ಹೊಲೆಯಲು ಪ್ರಾರಂಭಿಸೊಣ.

**ಎರಡನೇಯ ಹಂತ : ತೋಳುಗಳ ಅಂಚು ಮತ್ತು ಸೈಡ್ ಸೀಮ್ ಅನ್ನು ಸೇರಿಸೋದು.**



















ಮೊದಲು ತೋಳುಗಳನ್ನು ಹೊಲೆಯಲು ಪ್ರಾರಂಭಿಸೋಣ. ಬಟ್ಟೆಯನ್ನು ನಿಮ್ಮ ಊಷಾ ಜನೋಮ್ ಡ್ರೀಮ್ ಮೇಕರ್ 120 ಹತ್ರ ತೆಗೆದೊಕೊಂಡು ಹೊಗೋಣ,

ಮಶೀನ್ ಆನ್ ಮಾಡಿ ಬಟ್ಟೆಯನ್ನು ಪ್ರೆಸ್ಸರ್ ಫೂಟ್ ನ ಅಂಚಿನಲ್ಲಿ ತೋಳಿನ ಕೊನೆಯನ್ನು ಇಡಿ. ಹೊಲೆಯುವ ಶೈಲಿಯನ್ನು ನಂಬರ್ 1ಕ್ಕೆ ಇಡಿ.ಇದು ನೇರವದ ಹೊಲಿಗೆ. ಹೊಲಿಗೆ ಉದ್ದ 2.2 ಇರಬೇಕು. ಆನ್ ಬಟನ್ ಒತ್ತಿ ಹೊಲೆಯಲು ಪ್ರಾರಂಭಿಸಿ ಸ್ವಲ್ಪ ಹೊತ್ತು ಹೊಲೆದ ನಂತರ ರಿವರ್ಸ್ ಹೊಲಿಗೆ ಬಟನನ್ನು ಒತ್ತಿ ನಿಮ್ಮ ಹೊಲಿಗೆ ಭದ್ರಗೊಳಿಸಿ. ಕತ್ತಿನ ಹತ್ತಿರ ಬರುವವರೆಗೂ ನೆರವಾಗಿ ಹೊಲೆಯುತ್ತಾ ಹೋಗಿ.ಆನಂತರ ಒಂದು ರಿವರ್ಸ್ ಹೊಲಿಗೆ ಹಾಕಿ.ಇನ್ನೊಂದು ಕಡೇನೂ ಇದೇ ವಿಧಾನವನ್ನು ಅನುಸರಿಸಿ ಮಾಡಿ, ಅಂದರೆ ತೋಳಿನಿಂದ ಕತ್ತಿನವರೆಗೂ.

ಇದಾದ ನಂತರ ನಾವು ಸೈಡ್ ಸೀಮ್ಸ್ ಅನ್ನು ಹೊಲೆಯಲು ಪ್ರಾರಂಭಿಸೋಣ. ತೋಳಿನ ಕೆಳಭಾಗದಿಂದ ಹೊಲೆಯಲು ಪ್ರಾರಂಭಿಸಿ ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ. ಅದು ಬಹಳ ಮುಖ್ಯ ಇದೇ ಹೊಲಿಗೆಯನ್ನು ಭದ್ರಮಾಡುತ್ತದೆ. ತೋಳಿನ ಕೊನೆಗೆ ಬಂದ ನಂತರ ಪಿವಟ್ ಕ್ರಮವನ್ನು ಬಳಸಿರಿ.ಈ ಕ್ರಮ ಹೇಗೆ ಅಂದರೆ ಬಟ್ಟೆಯನ್ನು ಸೂಜಿಯ ಒಳಗೆ ಇಟ್ಟು ಅದನ್ನು ತಿರುಗಿಸಬೇಕು ಇದರಿಂದ ತೋಳಿನಿಂದ ಬ್ಲೌಸ್ನ ಅಂತ್ಯದವರೆಗೂ ಒಂದೇ ಹೊಲಿಗೆ ಇರೋದನ್ನ ಕಾಣಬಹುದು.

ಇದೇ ರೀತಿ ಇನ್ನೋಂದು ಕಡೆಯಲ್ಲೂ ಹೊಲೆಯಬೇಕು. ತೋಳಿನ ಕೆಳಗಿನಿಂದ ಬ್ಲೌಸ್ನ ಅಂತ್ಯದವರೆಗೂ ನೀವು ಹೊಲೆಯಬೇಕು.

ಅದ್ಭುತ ನಿಮ್ಮ ಹೊಲಿಗೆ ನೆನೆದು ಆಶ್ಚರ್ಯ ಪಡುತ್ತಿದ್ದೀರಾ? ಈಗ ನಾವು ಜಿಗ್ ಜಾಗ್ ಹೊಲಿಗೆಯನ್ನು ಬಳಸಿ ಅಂಚನ್ನು ಒಂದು ಪರಿಪೂರ್ಣ ಮುಕ್ತಾಯವನ್ನು ಕೊಡಬೇಕು. ನಿಮ್ಮ ಊಷಾಗೆನೋಮ್ ಡ್ರೀಮ್ ಮೇಕರ್ 120 ಅಲ್ಲಿ ಜಿಗ್ ಜಾಗ್ ಹೊಲಿಜನೋಮ್ ನೇರವಾಗಿ ಆರಿಸಿಕ್ಕೊಳ್ಳಲು ನಂಬರ್ ಪ್ಯಾಡ್ ನಲ್ಲಿ 7ನೇ ನಂಬರನ್ನು ಒತ್ತಿ.

ತೋಳಿನಿಂದ ಹೊಲೆಯಲು ಪ್ರಾರಂಭಿಸಿ ತೋಳಿನ ಭಾಗವನ್ನು ಹೊಲೆದು ಕತ್ತಿನಭಾಗದಲ್ಲಿ ನಿಲ್ಲಿಸಿ. ಜಿಗ್ ಜಾಗ್ ಹೊಲಿಗೆಗೆ ರಿವರ್ಸ್ ಹೊಲಿಗೆ ಬೇಕಾಗಿಲ್ಲಾ ಎಂದು ನೆನಪ್ಪಿಟ್ಟುಕ್ಕೊಳ್ಳಿ, ನಿಮ್ಮ ಹೊಲಿಗೆ ನೊಡೋಕೆ ಹೀಗೆ ಇರಬೇಕು. ಬಟ್ಟೆಗೆ ಎಂಥಾ ಸುಂದರವಾದ ನೋಟ ಕೊಟ್ಟಿದೆ ಅಂಥಾ ನೋಡುತ್ತಾ ಇದ್ದೀರಾ? ಇದೇ ವಿಧಾನವನ್ನು ನಾವು ಇನ್ನೊಂದು ಕಡೆ ಕೊಡ ಮಾಡಬೇಕು.

ಇದಾದ ನಂತರ ತೋಳಿನ ಕೆಳಭಾಗವನ್ನು ಹೊಲೆಯೋಣ. ತೋಳಿನ ಕೆಳಭಾಗದಿಂದ ಪ್ರಾರಂಭಿಸಿ ತೋಳಿನ ಕೆಳಭಾಗದಿಂದ ಪಿವಟ್ ಮಾಡಿ ಬ್ಲೌಸ್ ನ ಕಡೆವರೆಗೂ ಹೊಲೆಯುತ್ತಾ ಹೋಗಬೇಕು.


ವೀಡೀಯೋದಲ್ಲಿ ತೋರಿಸಿದ ಹಾಗೆ ಪಿವಟ್ ಪಾಯಿಂಟ್ ನಲ್ಲಿ ನಾಚಸ್ ಹಾಕಬೇಕು. ನಾಚಸ್ ಹಾಕುವುದರಿಂದ ಕೈಯಿನ ಕೆಳಗೆ ಸುಕ್ಕಾಗುವುದನ್ನು ತಡೆಯಬಹುದು. ಈ ವಿಧಾನವನ್ನು ಮಾಡುವಾಗ ನಿಮ್ಮ ಹೊಲಿಗೆ ಬಿಟ್ಟುಹೋಗದಂತೆ ನೋಡಿಕ್ಕೊಳ್ಳಿ

## ಹಂತ ಮೂರು : ತೋಳನ್ನು ಮುಗಿಸೋಣ.

ಈ ವೀಡಿಯೋದಲ್ಲಿ ತೋರಿಸಿದಂತೆ ತೋಳಿನ ಕೊನೆ ಭಾಗದಲ್ಲಿ ಅರ್ಧ ಇಂಚಿನ ಎರಡುಬಾರಿ ಮಾಡಬೇಕು. ಸರ್ಕ್ಯುಲರ್ ಸೀಮನ್ನು ಹೊಲೆಯಲು ಅನಕೂಲವಾಗುವಂತೆ ಮಶೀನಿನ ಡಿಟ್ಯಾಚಬಲ್ ಅಸೆಸರೀಸ್ ಬಾಕ್ಸನ್ನು ಬಿಚ್ಚಬೇಕು. ನೇರಾವಾಗಿರುವ ಹೊಲಿಗೆ ಬಟನ್ ಆಯ್ಕೆ ಮಾಡಿ. ಆ ಮಡಿಕೆಯನ್ನು ಹೊಲೆಯಲು ಪ್ರಾರಂಭಿಸಿ ಪೂರ್ತಿಯಾಗಿ ಹೊಲೆಯುತ್ತಾ ಬನ್ನಿ.

ಇನ್ನೊಂದು ತೋಳಿಗೂ ಸಹಾ ಇದೇ ವಿಧಾನವನ್ನು ಪಾಲಿಸಬೇಕು. ಅರ್ಧ ಇಂಚಿನಷ್ಟು ಎರಡು ಸಲ ಮದಚಿ ಅದನ್ನು ಹೊಲೆಯಬೇಕು. ಈಗ ಬಟ್ಟೆಯ ಕೆಳಭಾಗಕ್ಕೆ ಹೊಗೋಣ.









## ನಾಲ್ಕನೇ ಹಂತ್ : ತುದಿಯನ್ನ ಹೊಲೆಯುವುದು.

ಒಂದು ಪರಿಪೂರ್ಣ ಮುಕ್ತಾಯ ಕೊಡುವುದಕ್ಕೆ ತೋಳಿನ ತರಹ ಇದನ್ನೂ ಸಹಾ ಅರ್ಧ ಇಂಚಿನಷ್ಟು ಎರಡು ಬಾರಿ ಮಡಚಿ ಅದನ್ನು ಹೊಲೆಯಲು ಪ್ರಾರಂಭಿಸಬೇಕು. ಇದನ್ನು ಪೂರ್ತಿಯಾಗಿ ಹೊಲೆಯುತ್ತಾ ಹೋಹಬೇಕು. ಇನ್ನೇನು ಮುಗಿದಂತೆ.








## ಐದನೇ ಹಂತ : ಕತ್ತಿನ ಭಾಗವನ್ನ ಹೊಲಿಯುವುದು.

ಕತ್ತಿನ ಭಾಗವನ್ನ ಪೈಪ್ ಮಾಡೋಣ, ಅದರಿಂದ ಆಗಲ ಕಾಣಿಸೊಲ್ಲಾ ಅದಕ್ಕೆ ಬದಲಾಗಿ ಕರ್ವ್ ಆಕಾರದಲ್ಲಿ ಕಾಣಿಸುತ್ತದೆ. ಅದನ್ನ ಮಾಡೋಕೆ ಮಾಮೂಲಾಗಿರುವ ಪ್ರೆಷ್ರರ್ ಫುಟ್ಮ್ ತೆಗೆದು ಊಷಾ ಗೆನೊಮ್ ಓವರ್ ಏಡ್ಜಿಂಗ್ ಫುಟನ್ನು ಹಾಕಬೇಕು. ನಿಮ್ಮ ಊಷಾ ಗೆನೋಮ್ ಡ್ರೀಮ್ ಮೇಕರ್ 120 ಅಲ್ಲಿ 14ನಂಬರ್ ಆರಿಸಿ ಹೊಲೆಯಲು ಪ್ರಾರಂಭಿಸಿ. ಕತ್ತಿನ ಪೂರ್ತಿ ಇದನ್ನು ಹೀಗೆ ಹೊಲೆಯಿರಿ.







ಅಷ್ಟೇ ಈ ಕೆಲಸ ಮುಗಿಯಿತು. ತುಂಬಾ ಸುಲಭವಾಗಿದೆ ಅಲ್ವಾ? ಕೆಳಗಿರುವ ಕಮೆಂಟ್ ಸೆಕ್ಷನ್ ಅಲ್ಲಿ ಈ ಬ್ಲೌಸನ್ನು ಯವುದರೊಂದಿಗೆ ಹೊಂದಿಸಿಕ್ಕೊಳ್ಳುತ್ತೀರ ಎಂದು ಹೇಳಿ. ಮರೀದೆ ಲೈಕ್ ಮಾಡಿ, ಶೇರ್ ಮಾಡಿ ಹಾಗೂ ಸಬ್‌ಸ್ಕ್ರೈಬ್ ಮಾಡಿ.

